**ಸಾಕ್ಷಿಯನ್ನು ದಿಃ 15.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನಗೆ ಈಗ 75 ವರ್ಷ ಆಗಿದೆ.

2. ಪ್ರತಿವಾದಿ ಯಶೋದಮ್ಮ ನನ್ನ ಚಿಕ್ಕಮ್ಮ. ನಾಗರಾಜ ಅವರ ಮಗ.

3. ಸಣ್ಣೇಗೌಡ ನನ್ನ ತಂದೆಯ ತಮ್ಮ.

4. ನಾವು 6 ಜನ ಸಹೋದರರು.

5. ಯಶೋದಮ್ಮ ನವರ ಮದುವೆಯಾದಾಗ ನನಗೆ 10 ವರ್ಷವಾಗಿತ್ತು.

6. ಸಣ್ಣೇಗೌಡರ ತಂದೆ ಹೆಸರು ವೈಕುಂಠೇಗೌಡ ಹಾಗೂ ನರಸೇಗೌಡ ಎಂದು ಕರೆಯುತ್ತಿದ್ದರು. ದಾಖಲೆಗಳಲ್ಲಿ ವೈಕುಂಠೇಗೌಡ ಎಂದು ಹೆಸರಿತ್ತು.

7. ಸಣ್ಣೇಗೌಡ ಹಾಗೂ ಯಶೋದಮ್ಮ ನವರ ನಡುವೆ ಕೇಸ್ ಗಳು ನಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ.

8. ಸಣ್ಣೇಗೌಡ ಹಾಗೂ ಯಶೋದಮ್ಮ ನವರ ನಡುವೆ ಆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ.

9. ನಮ್ಮ ಊರಿನಲ್ಲಿ ಸಣ್ಣೇಗೌಡ ಎಂಬುವವರು ಈಗ ಒಬ್ಬರೇ ಇದ್ದಾರೆ. ಇನ್ನೊಬ್ಬರು ಇದ್ದರು, ಅವರು ಈಗ ಮೃತರಾಗಿರುತ್ತಾರೆ, ಅವರು ಸಹ ನಮ್ಮ ದಾಯಾದಿ.

10. ಮೃತರಾದ ಸಣ್ಣೇಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ.

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ಅದರಲ್ಲಿ ಬರೆದ ವಿಚಾರಗಳು ಗೊತ್ತಾ ಎಂದರೆ, ನನಗೆ ನೆನಪಿಲ್ಲ. ಅದನ್ನು ಯಾರು ಬರೆದರು ಎಂದು ನನಗೆ ನೆನಪಿಲ್ಲ.

12. ನೀವು, ಬ್ರಹ್ಮಾನಂದ, ನಾಗೇಗೌಡ, ದೇವರಾಜು ಹಾಗೂ ಪಿಡಬ್ಲೂ- 2 ರೇವಣ್ಣ ರವರು ಸೇರಿ ಯಶೋದಮ್ಮ ನವರ ಮೇಲೆ ಕೇಸ್ ಹಾಕಿದ್ದೇವೆ ಎಂದರೆ ಸರಿ. ಸ.ನಂ.147 ಪೋಡು ಆದ ವಿಚಾರಕ್ಕೆ ಕೇಸ್ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೇಸ್ ನಡೆಸಲು ನನ್ನ ಮಗನಿಗೆ ಸಹಿ ಮಾಡಿ ಕೊಟ್ಟಿರುತ್ತೇನೆ.

13. ಸ.ನಂ.142 ರಲ್ಲಿ 19 ಪೋಡು ಆಗಿ, ಅವರು ನಕಾಶೆ ಮಾಡಿಕೊಂಡ ವಿಚಾರವಾಗಿ ಅವರ ಹಾಗೂ ನಿಮ್ಮ ನಡುವೆ 2 ವರ್ಷದಿಂದ ಜಗಳವಾಗಿ ಮಾತುಕತೆ ಇಲ್ಲ ಹಾಗೂ ಅವರ ಮೇಲೆ ನಿಮಗೆ ದ್ವೇಷ ಇದೆ ಎಂದರೆ ಸರಿಯಲ್ಲ.

14. ಕೆಂಪಮ್ಮ ನವರು ಮೂಲತಃ ಸಣ್ಣೇಗೌಡನ ಕೂಪ್ಪಲು. ಅವರ ತಂದೆ ಹೆಸರು ನನಗೆ ನೆನಪಿಲ್ಲ. ಅವರನ್ನು ನನ್ನ ಚಿಕ್ಕಪ್ಪ ಮದುವೆ ಮಾಡಿಕೊಂಡಿದ್ದರಿಂದ ನೋಡಿರುತ್ತೇನೆ. ಯಾವ ದಿನಾಂಕ ಹಾಗೂ ವರ್ಷದಲ್ಲಿ ಮದುವೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಲಗ್ನ ಪತ್ರಿಕೆ ಮಾಡಿದ್ದ ಬಗ್ಗೆ ಗೊತ್ತಿಲ್ಲ. ಅಂದಾಜು ಎಷ್ಟು ವರ್ಷದ ಹಿಂದೆ ಮದುವೆಯಾಗಿದೆ ಎಂದು ಗೊತ್ತಿಲ್ಲ.

15. ಕೆಂಪಮ್ಮರವರು ಸಣ್ಣೇಗೌಡರ ಪತ್ನಿ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ. ಅವರ ಮದುವೆಯದಾಗ ನನಗೆ ಎಷ್ಟು ವರ್ಷವಾಗಿತ್ತು ಎಂದು ನೆನಪಿಲ್ಲ.

16. ಮೈಸೂರು ಭೂ ನ್ಯಾಯಾಯದಲ್ಲಿ ನೀವು ಕೇಸ್ ಹಾಕಿದ್ದೀರಾ ಎಂದರೆ ಸರಿ. ಆ ಕಾರಣಕ್ಕೆ ನೀವು ಪ್ರತಿವಾದಿಗಳಿಗೆ ತೊಂದರೆಯಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಅವರಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಹಾಗೂ ಯಾವುದೇ ದಾಖಲೆ ಇಲ್ಲದಿದ್ದರೂ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ